ಇಂಜಿನಿಯರಿಂಗ್ ಓದಿದ್ದರು. ಇಬ್ಬರಿಗೂ ಕೈತುಂಬ ಸಂಬಳ ಬರುವ ಕೆಲಸ ಇತ್ತು. ಮಗ ಬೆಂಗಳೂರಲ್ಲಿ, ಮಗಳು ಬೊಂಬಾಯಿಯಲ್ಲಿ ದೊಡ್ಡ ಕಂಪನಿಯಲ್ಲಿ ಕೆಲಸದಲ್ಲಿ ಇದ್ದಳು. ಇಬ್ಬರಿಗೂ ಮದುವೆ ಆಗಿತ್ತು. ಸೊಸೆ, ಅಳಿಯನಿಗೆ ಸಾ ಒಳ್ಳೆಯ ಸಂಬಳದ ಕೆಲಸ ಇತ್ತು. ಹೀಗಾಗಿ ಗೋವಿಂದ ರಾಯರಿಗೆ ಯಾವುದಕ್ಕೆ ಸಾ ಕೊರತೆ ಇರಲಿಲ್ಲ.

ಆದರೆ,

ಆ ದೇವರಿಗೆ ಇವರು ಚೆಂದದಿಂದ ಇರೂದು ಬೇಕಾಗಿರ್ಲಿಲ್ವಾ ಏನ. ನಾಲ್ಕು ವರ್ಷಗಳ ಹಿಂದೆ ಅನಸೂಯಕ್ಕನಿಗೆ ಕಂಡು ಬಂದದ್ದೇ ಸ್ತನದ ಕ್ಯಾನ್ಸರ್. ಪುಣ್ಯಕ್ಕೆ ಎರಡನೇ ಹಂತದಲ್ಲಿ ಅದು ಇದ್ದಾಗಲೇ ಗೊತ್ತಾಯಿತು. ಗೋವಿಂದ ರಾಯರು ಹೆಂಡತಿಗೆ ಹೀಗೆ ಆಯಿತು ಅಂತ ಗೊತ್ತಾದಾಗ ಭೂಮಿಗೆ ಇಳಿದು ಹೋಗಿದ್ದರು. ಎಂತ ಮಾಡುದು? ಅಂತ ಗೊತ್ತಾಗದೇ ಕಂಗಾಲಾಗಿ ಕೂತಿದ್ದರು. ಮಕ್ಕಳಿಬ್ಬರೂ, 'ಈ ಹಳ್ಳಿಯಲ್ಲಿ ಅಮ್ಮನಿಗೆ ಸರಿಯಾಗಿ ಟ್ರೀಟ್‌ಮೆಂಟ್ ಕೊಡಿಸ್ಲಿಕ್ಕೆ ಆಗೂದಿಲ್ಲ. ನೀವು ಇಲ್ಲಿ ಇರೂದನ್ನೆಲ್ಲ ಮಾರಿ ಬಂದು ಬಿಡಿ. ಬೆಂಗಳೂರಲ್ಲಾ ಬೊಂಬಾಯಿಯಲ್ಲಾ ಸರಿಯಾದ ಕಡೆ ನೋಡಿ ಟ್ರೀಟ್‌ಮೆಂಟ್ ಕೊಡಿಸ್ಲಿಕೆ ಆಗ್ತದೆ' ಅಂತ ಹೇಳಿದರು. ರಾಯರಿಗೆ ಸಾ ಒಮ್ಮೆಗೆ ಮಕ್ಕಳು ಹೇಳುದು ಸರೀ ಅಂತ ಕಂಡಿತು. ಆದರೆ, ತಲೆತಲಾಂತರಗಳಿಂದ ಬಾಳಿ ಬದುಕಿದ ಮನೆ, ಹಿರಿಯರ ಆಸ್ತಿ ಮಾತ್ರ ಅಲ್ಲ, ಸ್ವಯಾರ್ಜಿತ ಸಾ ಇತ್ತು. ಅದನ್ನೆಲ್ಲ ನಿಂತ ಮೆಟ್ಟಿಗೆ ಮಾರುವುದೆಂದರೆ? ಅವರಿಗೆ ಗೊಂದಲ ಉಂಟಾಯಿತು. ಹೆಂಡತಿಯ ಟ್ರೀಟ್‌ಮೆಂಟಿಗೆ ಒಂದಿಷ್ಟು ದುಡ್ಡು ಬೇಕು. ಅದನ್ನು ಮಕ್ಕಳು ಕೊಟ್ಟಾರು. ಆದರೆ, ಅವರಿಗೆ ಹೊರೆ ಅನ್ನಿಸಿದರೆ? ನಾಳೆಯ ದಿನ ಸೊಸೆಯೋ ಅಳಿಯನೋ ಕುಚ್ಚಣಿಸಲು ಸುರುಮಾಡಿದರೆ!? ಹೀಗೆಲ್ಲ ಎಣಿಸುತ್ತ ಚಿಂತೆಗೆ ಒಳಗಾದರು.

ಒಂದು ದಿನ ದೇವಸ್ಥಾನಕ್ಕೆ ಹೋಗುವಾಗ ಚಪ್ಪೆಗಟ್ಟಿದ್ದ ಇವರನ್ನು ಗಣಪಯ್ಯ ಮಾಷ್ಟ್ರು ಮಾತಾಡಿಸಿದರು. 'ರಾಯರೇ ಮೂರು ನಾಕು ದಿನಗಳಿಂದ ನಿಮ್ಮನ್ನು ನೋಡ್ತಾ ಇದ್ದೇನೆ. ಎಂಥದಾ ಮಂಡೆ ಬಿಸಿಯಲ್ಲಿ ಇದ್ದೀರಿ. ಎಂಥದಾಯ್ತು?' ಅದಕ್ಕೆ ಅವರು ಇದ್ದ ವಿಷಯ ಪೂರ ಹೇಳಿದರು. ಗಣಪಯ್ಯ ಮಾಷ್ಟ್ರು ಒಮ್ಮೆ ಕೇಳಿ ಕಂಗಾಲಾದರು. 'ರಾಯರೇ ಯಾರಿಗೆ ಸಾ ನೀವು ಕನಸು ಮನಸಿನಲ್ಲಿ ಸಾ ಕೆಟ್ಟದ್ದನ್ನು ಎಣಿಸಿದವರಲ್ಲ. ನಿಮ್ಮಂಥವರನ್ನು ಈ ಪ್ರಾಯದಲ್ಲಿ ದೇವರು ಹೀಗೆ ಪರೀಕ್ಷೆ ನೋಡ್ತಾನೆ ಅಂದರೆ ಆ ದೇವರಿಗೆ ಸಾ ಕರುಣೆ ಇಲ್ಲ ಅಂತ ಅರ್ಥ. ಆದರೆ, ರಾಯರೇ ನೀವು ಹೀಗೆ ನಿಂತ ಮೆಟ್ಟಿನಲ್ಲಿ ಮನೆ, ಆಸ್ತಿ ಎಲ್ಲ ಮಾರಿ ಹೋಗೂದು ಬೇಡ. ನಾನು ನನ್ನಿಂದ ಆದಷ್ಟು ನೋಡಿಕೊಳ್ತೇನೆ. ಬಂದ ಬೆಳೆಯಲ್ಲಿ ನಿಮಗೆ ಅಂತ ಕೊಟ್ಟು ಉಳಿದದ್ದನ್ನು ನಂಗೆ ಅಂತ ಇಟ್ಟುಕೊಳ್ತೇನೆ. ಮನೆಯನ್ನು ಹತ್ತು ಹದಿನೈದು ದಿನಗಳಿಗೊಮ್ಮೆ ನನ್ನ ಜನ ಕಳಿಸಿ ಗುಡಿಸಿ ಒರೆಸಿ ಎಲ್ಲ ಕ್ಲೀನಾಗಿ ಇಡುವ ವ್ಯವಸ್ಥೆ ನಾನು ಮಾಡಿಸ್ತೇನೆ. ರಾಯರೇ, ಒಂದು ಕಾಲದಲ್ಲಿ ನೀವು ನನ್ನ ಮಗನ ವಿದ್ಯಾಭ್ಯಾಸಕ್ಕೆ ಅಂತ ಹಣದ ಸಾಯ ಮಾಡದೇ ಇರ್ತಿದ್ರೆ ನನ್ನ ಮಗ ಇವತ್ತು ಇಷ್ಟು ದೊಡ್ಡ ಇಂಜಿನಿಯರ್ ಅಂತ ಆಗ್ತಿದ್ನಾ? ನಿಮ್ಮ ಉಪಕಾರ ತುಂಬ ದೊಡ್ಡದು. ಅದನ್ನು ಮರೆತರೆ ಆ ದೇವರು ನಂಗೆ ಒಳ್ಳೇದು ಮಾಡೂದಿಲ್ಲ. ಮಾತ್ರ ಅಲ್ಲ, ಆ ಅಮ್ಮ ಮನೆಗೆ ಬಂದಷ್ಟು ಸರ್ತಿ ನಂಗೆ ಊಟ ಹಾಕದೇ ಕಳಿಸಿದವರಲ್ಲ. ಇದೆಲ್ಲ ಮರೀಲಿಕ್ಕುಂಟಾ ರಾಯರೇ? ಆ ಅಮ್ಮನಿಗೆ ಒಳ್ಳೆಯ ಆಸ್ಪತ್ರೆಯಲ್ಲಿ ಟ್ರೀಟ್‌ಮೆಂಟ್ ಕೊಡಿಸಿ. ಹೇಗಾದರೂ ಅವರು ಬೇಗ ಗುಣ ಆಗಲಿ' ಅಂತ ಹೇಳಿದರು. ಗಣಪಯ್ಯ ಮಾಷ್ಟ್ರು ಸಲಹೆ ರಾಯರಿಗೆ ಒಪ್ಪಿತ ಅನಿಸಿತು. ಹಾಗೆ ಅವರ ಸುಪರ್ದಿಗೆ ಮನೆ, ತೋಟ ಎಲ್ಲ ಒಪ್ಪಿಸಿ ಹೊರಟಿದ್ದರು.

ಗೋವಿಂದ ರಾಯರೇನೋ ಮಗನ ಮನೆಗೆ ಬೆಂಗಳೂರಿಗೆ ಬಂದರು. ಹೆಂಡತಿಗೆ ಒಳ್ಳೆಯ ಆಸ್ಪತ್ರೆಯಲ್ಲಿ ಟ್ರೀಟ್‌ಮೆಂಟ್ ಸಾ ಸಿಕ್ಕಿತು. ಏನೋ ಕಣ್ಣಿಗೆ ಬರುವುದು ಕಣ್ಣ ರೆಪ್ಪೆಗೆ ಬಂತು ಎನ್ನುವ ಹಾಗೆ ದೊಡ್ಡ ಮಟ್ಟದಲ್ಲಿ ತೊಂದರೆ ಆಗುವ ಮುಂಚೆಯೇ ಅನಸೂಯಮ್ಮ ಒಂದು ಹಂತದಿಂದ ಬಚಾವು ಆದರು. ಎರಡು ವರ್ಷ ತಪಸ್ಸಿನ ಹಾಗೆ ಮದ್ದು ಮಾಡ್ತಾ ಬಂದದ್ರಿಂದ ಕಂಟ್ರೋಲಿಗೆ ಬಂತು. ಅನಸೂಯಮ್ಮನಿಗೆ ಸದ್ಯಕ್ಕೆ ಹೆದರಿಕೆ ಇಲ್ಲ ಅಂತ ಎಣಿಸಿದಾಗ ಖುಷಿಯಾಗಿತ್ತು. ಆದರೆ, ರಾಯರು ಮಾತ್ರ ಚಪ್ಪೆಗಟ್ಟಿದ್ರು. ಫ್ಲ್ಯಾಟಿನೊಳಗೆ ಇದ್ದು ಇದ್ದು ಕೈಕಾಕಲು ಕಟ್ಟಿ ಹಾಕಿದ ಹಾಗೆ ಆಗ್ತಿತ್ತು. ಒಂದೆರಡು ಸರ್ತಿ ಮನೆಯಲ್ಲಿ ಯಾರೂ ಇಲ್ಲದೇ